INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -4, July-August, 2023,
PageNo,36-44
Peer -Reviewed, Refereed Journal

# ಪಿರಿಯಾಪಟ್ಟಣ ತಾಲೋಕು ಪ್ರದೇಶದ ಜೈನ ಬಸದಿಗಳ ಕುರಿತ ಅಧ್ಯಯನ

**ಪೂರ್ಣಿಮಾ.ಎ.[1]**

ಜೈನರಲ್ಲಿ ವರದಹಸ್ತ ಹೊಂದಿದ ಆಯುಧ ದಾರಿ ದೇವರ ವಿಗ್ರಹಗಳನ್ನು ಪೂಜಿಸುವುದು. ಕಮ್ಮಿ ಸಾಧಾರಣವಾಗಿ ಜನರು ದೇವರು ಮೋಕ್ಷಕ್ಕೆ ಹೋದ ಕ್ಷಣವೆ ಆಗಿರುತ್ತದೆ. ಅಂದರೆ ಸಮವಸರಣದಲ್ಲಿ ವಿರಾಜಮಾನರಾದ ತೀರ್ಥಂಕರರ ತಪೋಮಗ್ನ ಭಂಗಿಯನ್ನು ಪೂಜಿಸುತ್ತಾರೆ. ಇಂತಹ ಚೈತ್ಯಾಲಯಗಳನ್ನು ಬಸದಿ ಎಂದು ಕರೆಯುತ್ತಾರೆ. ಜೈನ ಆಗಮಗಳ ಪ್ರಕಾರ; ಜೈನನಾದವನು ಪ್ರತಿದಿನವೂ ದೇವರ ಅಂದರೆ ಪಂಚಕಲ್ಯಾಣ ಆದ ತೀರ್ಥಂಕರರನ್ನು ದರ್ಶನ ಪಡೆಯಬೇಕು. ಆದ್ದರಿಂದ ವಾಸವಿರುವ ಪ್ರತಿ ಊರಿನಲ್ಲೂ ಬಸದಿಗಳನ್ನು ಕಾಣಬಹುದು. ಬಸದಿ ಎನ್ನುವುದು ಪ್ರಾಕೃತ ಭಾಷೆಯ ಮೂಲ ಪದವಾಗಿದೆ. ಜೈನ ಬಸದಿಗಳನ್ನು ಭಾರತದ ಮೂಲೆಮೂಲೆಯಲ್ಲೂ ಕಾಣಬಹುದು. ಸರಿಸುಮಾರು 2000 ವರ್ಷಗಳ ಹಿಂದಿನಿಂದಲೂ ಜೈನಬಸದಿಗಳ ನಿರ್ಮಾಣದ ಕಾರ್ಯನಡೆಯುತ್ತಿದೆ. ಮುಜರಾಯಿ ಇಲಾಖೆ ಸೇರಿದ ದೇವಾಲಯಗಳಲ್ಲಿ ಅತಿ ಹೆಚ್ಚು ಜೈನ ಬಸದಿಗಳಿವೆ. ಅವುಗಳಲ್ಲಿ ಚತುರ್ಮುಖ ಬಸದಿ, ಪಂಚಕೂಟ ಬಸದಿ, ತ್ರಿಕೂಟ ಬಸದಿ, ಬಸದಿಯ ವಿನ್ಯಾಸವೂ ಸಾಧಾರಣ ಬಸದಿಯಲ್ಲಿ ಪಂಚಕಲ್ಯಾಣ ಆದ ಒಂದು ವಿಗ್ರಹವನ್ನು ಬಂದಿದ್ದ ಗರ್ಭಗೃಹ ಮತ್ತು ಮುಂದೆ ಒಂದು ಆಯತಾಕಾರದ ಕೊಠಡಿಯೂ ಬಸದಿ ಎಂದರೆ; ತಂಗುವ ಸ್ಥಳ ಜಿನ ಬಸದಿ ಜಿನ ಎಂದರೆ; ತೀರ್ಥಂಕರರು ಜಿನ ಬಸದಿ ತೀರ್ಥಂಕರರು ತಂಗುವ ಸ್ಥಳ ಎಂದರ್ಥ ಬರುತ್ತದೆ.

ಚಂದ್ರಶಾಲೆ – ಮುಂಭಾಗದಲ್ಲಿ ಚಂದ್ರಶಾಲೆ ಇರುತ್ತದೆ. ಕೆಲವೊಮ್ಮೆ ಚಂದ್ರಶಾಲೆಗಿಂತಲೂ ಮೊದಲು ಮಾನಸ್ತಂಭ ಇರುತ್ತದೆ. ಕೆಲವೊಮ್ಮೆ ಚಂದ್ರಶಾಲೆಯ ಮುಂದೆ ಮಾನಸ್ತಂಭ ಇರುವುದನ್ನು ಕಾಣಬಹುದು ಭಾರತೀಯ ವಾಸ್ತುಶಿಲ್ಪದ ಅದ್ಭುತ ಪರಿಕಲ್ಪನೆ ಮಾನವನ ದೇಹದ ವಾಸ್ತು ಎನ್ನಲಾಗುವ ವಾಸ್ತು ಎನ್ನಬಹುದು.

ಮಾನಸ್ತಂಭ – ಮಾನಸ್ತಂಭದಲ್ಲಿ ಚತುರ್ಮುಖ ದಿನ ಬಿಂಬವು ಇರುತ್ತದೆ. ಇದು ಕೂಡ ಸಮವಸರಣದ ಪರಿಕಲ್ಪನೆಯೇ ಸಮಾಜದಲ್ಲಿ ನಾಲ್ಕು ದಿಕ್ಕಿಗೂ ಮನಸ್ತಾಪಗಳು ಇರುತ್ತವೆ ಎನ್ನುವ

[1].**ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.**

ಉಲ್ಲೇಖವಿದೆ. ಸಾವಿರ ಕಂಬದ ಬಸದಿ, ವರಂಗ ಕೆರೆ ಬಸದಿ, ಚತುರ್ಮುಖ ಬಸಾಡಿ ಕಾರ್ಕಳ, ಸಂಘಿಜಿ, ಶ್ರೀದಿಗಂಬರ ಜೈನ್ ಲಾಲ್ ಮಂದಿರ, ಹಾರಿಗೆ ಬಸದಿ.

ಸಾವಿರ ಕಂಬದ ಬಸದಿಯು ಕರ್ನಾಟಕದ ಪ್ರಮುಖ ಬಸದಿ – ಜೈನ ಮಂದಿರವೆ ಆಗಿರುತ್ತದೆ. ಈ ಮಂದಿರವನ್ನು ತ್ರಿಭುವನ ತಿಲಕ ಚೂಡಾಮಣಿ ಬಸದಿ ಎಂದೂ ಕರೆಯಲಾಗುತ್ತದೆ. 1000 ಕಂಬಗಳನ್ನು ಹೊಂದಿರುವ ಈ ಬಸದಿಯು ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ತಾಲೂಕು ಕೇಂದ್ರದಲ್ಲಿದೆ ಎಂಬುದು ತಿಳಿದುಬರುತ್ತದೆ. ಈ ಬಸದಿಯನ್ನು ಕ್ರಿ.ಶ 1430ರಲ್ಲಿ ನಿರ್ಮಾಣ ಮಾಡಲಾಗಿದೆ. ಇದನ್ನು 1962ರಲ್ಲಿ ಕೃಷ್ಣದೇವರಾಯರ ಆಸ್ಥಾನದಲ್ಲಿದ್ದ ದೇವರಾಯ ಒಡೆಯರ್ ಜೀರ್ಣೋದ್ಧಾರ ಮಾಡಿದರು. ಇದರಲ್ಲಿ 60 ಅಡಿಯ ಒಂಟಿ ಸ್ತಂಭವಿದ್ದು, ಇದನ್ನು ಕಾರ್ಕಳದ ಭೈರವ ರಾಣಿ ನಾಗಳ ದೇವಿ ಸ್ಥಾಪಿಸಿದರು. ಈ ಒಂದೆ ಸ್ಥಳದಲ್ಲಿ 18 ದೇವಸ್ಥಾನಗಳು, 18 ರಸ್ತೆಗಳು, 18 ಕೆರೆಗಳು ಹಾಗು 18 ಬಸದಿಗಳಿವೆ. ಇವೆಲ್ಲವೂ ಮಂಗಳೂರಿನಿಂದ 37 ಕಿಲೊಮಿಟರ್ ದೂರವಿರುವ ಮೂಡಬಿದರೆಯಲ್ಲಿದೆ. ಇಲ್ಲಿ ತುಂಬ ಬಿದಿರು ಗಳಿರುವ ಕಾರಣ ಈ ಪಟ್ಟಣಕ್ಕೆ ಮೂಡುಬಿದಿರೆ ಎಂಬ ಹೆಸರು ಬಂತು, ಮೂಡ– ಪೂರ್ವ ಮತ್ತು ಬಿದಿರೆ – ಬಿದಿರು. ಮೂಡಬಿದಿರೆಯು ಚೌಟ ಎಂಬ ಕುಟುಂಬದ ಆಳ್ವಿಕೆಗೆ ಒಳಪಟ್ಟಿತ್ತು. ಅವರ ನಿಜವಾದ ಆಳ್ವಿಕೆ ಪುತ್ತಿಗೆ ಎಂಬ ಸ್ಥಳದಲ್ಲಿತ್ತು. ಅದು ಮೂಡುಬಿದಿರೆಯಿಂದ 5 ಕಿ.ಮಿ. ದೂರದಲ್ಲಿದೆ. ಅವರು 17ನೇ ಶತಮಾನದಲ್ಲಿ ಮೂಡಬಿದಿರೆಯನ್ನು ರಾಜಧಾನಿಯಾಗಿ ಮಾಡಿಕೊಂಡರು. ಅಲ್ಲಿ ಅವರು ಅರೆಮನೆಯನ್ನು ನಿರ್ಮಿಸಿದರು ಅದನ್ನು ಈಗಲೂ ನೋಡ ಕಾಣಬಹುದು. ಮೂಡುಬಿದಿರೆಯು ಪುರಾತನ ಆಕರ್ಷಣೆಯನ್ನು ಈಗಲೂ ಉಳಿಸಿಕೊಂಡಿದೆ. ಹಲವು ಜೈನ ಹಬ್ಬಗಳನ್ನು ವರ್ಷವಿಡಿ ಆಚರಿಸಲಾಗುತ್ತದೆ. ಇಲ್ಲಿ ಸುಂದರವಾದ ಜೈನ ತೀರ್ಥಂಕರ ಮೂರ್ತಿಗಳಿವೆ. ಪ್ರತಿಯೊಂದು ಜೈನ ಬಸದಿಯಲ್ಲೂ ಯಕ್ಷ ಮತ್ತು ಯಕ್ಷಿಣಿ ಇರುತ್ತವೆ. ಮೂಡುಬಿದಿರೆಯಲ್ಲಿ ಜೈನ ಧರ್ಮದ ಇತಿಹಾಸವು 13ನೇ ಶತಮಾನದಲ್ಲಿ ಪ್ರಾರಂಭವಾಯಿತು. ಆದರೆ 14 ಮತ್ತು 16ನೇ ಶತಮಾನದ ಜೈನ ಧರ್ಮದ ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪ ಈ ಸ್ಥಳದ ಬೆಳವಣಿಗೆ ಸಾಕ್ಷಿಯಾಗಿದೆ. ತ್ರಿಭುವನ ತಿಲಕ ಚೂಡಮಣಿ ಬಸದಿಯು ಕರ್ನಾಟಕದ ಕರಾವಳಿ ತೀರದ ದೊಡ್ಡ ಬಸದಿ ಎನ್ನಲಾಗುತ್ತದೆ. ಇದೊಂದು ಅಮೂಲ್ಯವಾದ ಜೈನ ದೇವಸ್ಥಾನ. ಯಾಕೆಂದರೆ ಇದರಲ್ಲಿ ವಿವಿಧ ತರಹದ ಸಾವಿರ ಸ್ತಂಭಗಳು ಇವೆ. ಇವುಗಳಿಂದಲೇ ಈ ಮಂದಿರವು ಸಾವಿರ ಕಂಬಗಳ ಬಸದಿ ಎಂದು ಜನಜನಿತವಾಗಿದೆ.

ತೀರ್ಥಂಕರರ ಭಕ್ತಿಯು ಎಷ್ಟೆಂದರೆ; ಧ್ಯಾನದಲ್ಲಿ ಅವರು ನೀರಿನ ಮೇಲೆ ಸಹಾ ನಡೆಯಬಲ್ಲರು ಎನ್ನಲಾಗುತ್ತದೆ. ಜೈನರ ಪ್ರಕಾರ ಸಮಯಕ್ಕೆ ಹುಟ್ಟು ಹಾಗೂ ಸಾವು ಇಲ್ಲ. ಅವರ ಪ್ರಕಾರ 24

ತೀರ್ಥಂಕರರಿದ್ದಾರೆ. ಆದಿನಾಥ ಎಂಬುವವರನ್ನು ಮೊದಲ ತೀರ್ಥಂಕರ ಎಂದು ಕರೆಯಲಾಗುತ್ತದೆ. ಅವರನ್ನು ವೃಷಭ ದೇವ ಎಂದೂ ಕರೆಯುತ್ತಾರೆ. ಪಾರ್ಶ್ವನಾಥ ಎಂಬುವವರನ್ನು 23ನೇ ತೀರ್ಥಂಕರ ಎಂದು ಕರೆಯಲಾಗುತ್ತದೆ. ಕೊನೆಯದಾಗಿ ವರ್ಧಮಾನ ಮಹಾವೀರರು 24ನೇ ತೀರ್ಥಂಕರರು. ಇವರು 6ನೇ ಶತಮಾನದಲ್ಲಿ ಅಂದರೆ; ಬೌದ್ಧಧಮ್ಮದ ಸಂಸ್ಥಾಪಕರಾದ ಬುದ್ದನ ಕಾಲದಲ್ಲಿ ಜೀವಿಸಿದ್ದರು. ಇದೇ, 24 ತೀರ್ಥಂಕರರ ವಿಗ್ರಹಗಳನ್ನು ಪ್ರತಿಯೊಂದು ಜೈನ ಬಸದಿಗಳಲ್ಲೂ ಕಾಣಬಹುದು. ಇಲ್ಲಿರುವ ಗುರು ಬಸದಿಯು ಜೈನ ಧರ್ಮದ ಪ್ರಾಚೀನ ಬಸದಿಯಾಗಿರುತ್ತದೆ. ಈ ಬಸದಿಯಲ್ಲಿರುವ ಪಾರ್ಶ್ವನಾಥರ ಕಲ್ಲಿನ ಮೂರ್ತಿಯು ಸರಿಸುಮಾರು 3.5 ಮೀಟರ್ ಎತ್ತರ ಇದೆ. ಇಲ್ಲಿ ಜೈನರ 12ನೇ ಶತಮಾನದ ತಾಳೆಗರಿಯಲ್ಲಿ ಬರೆದಿರುವ ಧವಳ ಕೈ ಬರಹ ಗ್ರಂಥವನ್ನು ಸಂಗ್ರಹಿಸಿ ಇಡಲಾಗಿದೆ.

ಜೈನ ಮಠವು ಮೂಡಬಿದಿರೆಯಲ್ಲಿರುವ ಎಲ್ಲಾ ಬಸದಿಗಳ ಕಾರ್ಯನಿರ್ವಹಣೆಯನ್ನು ಮಾಡುತ್ತದೆ. ಈ ಮಠವನ್ನು ಜೈನರ ದಕ್ಷಿಣ ಕಾಶಿ ಎಂದು ಕರೆಯಲಾಗುತ್ತದೆ. ಚಾರುಕೀರ್ತಿಯವರು ಮೂಡಬಿದಿರೆಯಲ್ಲಿರುವ 18 ಜೈನ ಬಸದಿಗಳು ಮತ್ತು ಸುತ್ತಲಿನ ದೇವಸ್ಥಾನಗಳ ಉಸ್ತುವಾರಿಯನ್ನು ನಿರ್ವಹಿಸುತ್ತಾರೆ ಬಸದಿಯನ್ನು ವೀಕ್ಷಿಸಲು ಬಂದ ಪ್ರತಿಯೊಬ್ಬರಿಗೂ ಬಸದಿಯ ಮುಂದೆ ನಿಂತಾಗ ಸ್ತಂಭಗಳನ್ನು ವೀಕ್ಷಿಸಿದಾಗ ಪ್ರತಿಯೊಂದು ಸ್ತಂಭವು ತನ್ನ ಯುಗಗಳ ಇತಿಹಾಸವನ್ನು ವಿಸ್ತಾರವಾಗಿ ಬಿಂಬಿಸುತ್ತದೆ. ಪ್ರತಿಯೊಂದು ಸ್ತಂಭವು ಗ್ರಾನೈಟ್ ಕಲ್ಲಿನಿಂದ ಮೂಡಲ್ಪಟ್ಟಿದೆ. ಕೆತ್ತನೆಗಳು ತುಂಬಾ ಮನಮೋಹಕವಾಗಿದ್ದು, ತುಂಬಾ ಶಾಂತಿ ಮತ್ತು ಹಿತವಾದ ಅನುಭವವನ್ನು ನೀಡುತ್ತದೆ. ಕೆತ್ತನೆಗಳಲ್ಲಿ ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಬಂಧಗಳನ್ನು ಅದರಲ್ಲಿ ಚಿತ್ರಿಸಲಾಗಿದೆ. ಇದರಲ್ಲಿ ಜೈನಾ ಮತ್ತು ಆಫ್ರಿಕಾದ ಪ್ರಾಣಿ ಪಕ್ಷಿಗಳ ಕೆತ್ತನೆಗಳನ್ನು ಕೆತ್ತಲಾಗಿದೆ. ಹಾಗೆಯೇ ವಾಣಿಜ್ಯ ವ್ಯಾಪಾರದ ಖಂಡಗಳ ದಾರಿಯನ್ನು ಚಿತ್ರಿಸಲಾಗಿದೆ. ಕೀರ್ತಿಸ್ತಂಭವನ್ನು ವ್ಯಾಪಾರಿಯಾದ ಸಹಾಜೀಯಾರವರು, ಅವರ ಸ್ವಂತ ದುಡಿದ ದುಡಿಮೆಯಿಂದ ಆದಿನಾಥ ದೇವರ ದೇವಸ್ಥಾನದಲ್ಲಿ ಕಟ್ಟಿದರು. ಅನಂತರ ಕ್ರಿ.ಶ 1489ರಲ್ಲಿ ಅವರ ಮರಿಮೊಮ್ಮಗ ಅದನ್ನು ಜೀರ್ಣೋದ್ದಾರ ಮಾಡಿದರು. ಆದರೆ ಅದರ ನಿಜವಾದ ದಿನಾಂಕ ತಿಳಿದು ಬಂದಿಲ್ಲ. ಕೆಲವರ ನಂಬಿಕೆಯ ಪ್ರಕರ ಸಹಾಜೀಯಾರವರು ಇದನ್ನು 12ನೇ ಶತಮಾನದಲ್ಲಿ ಕಟ್ಟಿದರು ಎಂದು ತಿಳಿಸಲಾಗಿದೆ. ಅನಂತರ ರಾಣಾಕುಂಭರವರು ಕ್ರಿ.ಶ. 1458 – 1468ರಲ್ಲಿ ಮಹಮ್ಮದ್ ಕಿಲ್ಜಿಯವರ ಮೇಲೆ ಜಯ ಸಾಧಿಸಿದ ಗುರುತಿಗಾಗಿ ಜಯಸ್ತಂಭವನ್ನಾಗಿ ಸ್ಥಾಪಿಸಿದರು. ಮಾನಸ್ತಂಭವನ್ನು ಗೌರವ ಸ್ತಂಭವೆಂದು ಕರೆಯಲಾಗುತ್ತದೆ. ಈ ಸ್ತಂಭಗಳನ್ನು ಎಲ್ಲಾ ಜೈನ ಬಸದಿಗಳ ಮುಂಭಾಗದಲ್ಲಿ ಸ್ಥಾಪಿಸಲಾಗುತ್ತದೆ. ಜೈನ ಬಸದಿಗಳನ್ನು ನಾವು ಭಾರತದ ಉತ್ತರಖಂಡದಲ್ಲಿ ಇದು ನಾಲ್ಕು ತೀರ್ಥಂಕರದಲ್ಲಿ ಇದು ಉತ್ತುಂಗದಲ್ಲಿದೆ. ಜೈನ ಗ್ರಂಥದ ಪ್ರಕಾರ; ಜೈನರು ಮಾನಸ್ತಂಭದ ಮುಂದೆ

ತಲೆಭಾಗುತ್ತಾರೆ. ಮಾನಸ್ತಂಭವು ಬ್ರಹ್ಮದೇವರಿಗೆ ಹೋಲಿಕೆಯಾಗಿದೆ. ಇದೇ ರೀತಿಯಾಗಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೋಕು ಪ್ರದೇಶದಲ್ಲಿನ ಜೈನ ಬಸದಿಗಳ ನಿರ್ಮಾಣ ಬಗೆಗೆ ಒಂದು ಸ್ಥೂಲ ಪರಿಚಯವನ್ನು ಈ ಮುಂದಿನಂತೆ ಮಾಡಲಾಗಿರುತ್ತದೆ.

ಪಿರಿಯಾಪಟ್ಟಣ ತಾಲ್ಲೂಕಿನ ಉತ್ತರಕ್ಕೆ ಮತ್ತು ಬೆಟ್ಟದಪುರದಿಂದ ಈಶಾನ್ಯಕ್ಕೆ ಸರಿಸುಮಾರು 25 ಕಿ.ಮೀ. ದೂರದಲ್ಲಿ ಆನಿವಾಳು ಎಂಬ ಗ್ರಾಮವಿದಲ್ಲಿದೆ. ಹಾಗೆಯೇ ಸರಿಸುಮಾರು 15ನೇ ಶತಮಾನದ ಶಾಸನಗಳಲ್ಲೂ ಆನೆವಾಳ ಎಂದೇ ಉಲ್ಲೇಖಿತಗೊಂಡಿರುವ ಈ ಊರಲ್ಲಿರುವ ಶಾಸನ ಸಂಖ್ಯೆ – 52, 54, 53. ಹೀಗೆ ಈ ಮೂರು ಶಾಸನಗಳೂ ಸ್ಥಳಿಯ ಜೈನ ಬಸದಿಯ ನಿರ್ಮಾಣಕ್ಕೆ ಸಂಬಂಧಿಸಿದ ದಾಖಲೆಗಳಾಗಿರುತ್ತವೆ ಎಂಬುದು ತಿಲಿದುಬಂದಿರುತ್ತದೆ. ಅದರಿಂದ ಬ್ರಹ್ಮದೇವರು ಪದ್ಮಾವತಿಯ ಬಸದಿ ಎಂಬ ಹೆಸರಿದ್ದು, ಅಲ್ಲಿ ಅನಂತನ ಪ್ರತಿಮೆ ಇದ್ದ. ಅಂಶವೂ ವೇದ್ಯವಾಗುತ್ತದೆ. ಊರ ಬಳಿಯ ಬೆಟ್ಟದ ಮೇಲಿರುವ ಬಸದಿಗೆ ಪೂರ್ವದಿಕ್ಕಿನಲ್ಲಿ ಮುಖ್ಯ ಪ್ರವೇಶದ್ವಾರವಿದ್ದು, ಬಾಗಿಲುವಾಡದ ಮೇಲೆ ಮಹಾವೀರನ ಕೆತ್ತನೆಯಿದೆ. ಪ್ರವೇಶದ್ವಾರದ ಮೆಟ್ಟಿಲಿನಲ್ಲಿ ಆನೆಯ ಮುಖ ಹೊಂದಿರುವ ಚಪ್ಪಡಿಗಳಿವೆ. ಈ 'ಬಸದಿಯ' ಪ್ರವೇಶದ್ವಾರದ ಮುಂದೆ ಮುಖಮಂಟಪವಿದ್ದು, ನವರಂಗದ ದಕ್ಷಿಣ ಮತ್ತು ಉತ್ತರ ದಿಕ್ಕಿಗೆ ಮುಖಮಂಟಪಗಳಿರುವುದನ್ನು ಗುರುತಿಸಲಾಗಿದೆ.

ಆನೆವಾಳು ಗ್ರಾಮದ ವಾಯುವ್ಯ ದಿಕ್ಕಿಗೆ ಸರಿಸುಮಾರು 20 ಅಡಿ ಎತ್ತರವಾದ ಗುಡ್ಡದ ಮೇಲೆ ಶ್ರೀವೃಶಭಗಿರಿ ಆದಿನಾಥ ಬಸದಿ ಇದೆ. ಈ ಬಸದಿಯು ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ಬಸದಿಯು 3 ಅಡಿ ಎತ್ತರದ ಜಾಗತಿಯ ಮೇಲಿದ್ದು ಗರ್ಭಗೃಹ, ನವರಂಗ, ಮುಖಮಂಟಪವನ್ನು ಒಳಗೊಂಡಿದೆ. ಇದು ತ್ರಿಕೂಟಾಚಲ ಬಸದಿಯಾಗಿದ್ದು, ಮಧ್ಯದಲ್ಲಿನ ಗರ್ಭಗೃಹದಲ್ಲಿ ಮೂರುವರೆ ಅಡಿ ಎತ್ತರದ ಆದಿನಾಥನ ಶಿಲ್ಪವಿದೆ ಮತ್ತು ದಕ್ಷಿಣ ಗರ್ಭಗೃಹಗಳಲ್ಲಿ ಯಾವುದೇ ಮೂರ್ತಿ ಶಿಲ್ಪಗಳು ಕಂಡುಬರುವುದಿಲ್ಲ. ಆದರೆ, ಮೂರು ಗರ್ಭಗೃಹಗಳ ದ್ವಾರದ ಮೇಲ್ಭಾಗದಲ್ಲಿ ಆದಿನಾಥನ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಮೂರು ಗರ್ಭಗೃಹಗಳು ಉತ್ತರ ದಕ್ಷಿಣವಾಗಿ 20 ಅಡಿ ಪೂರ್ವ ಪಶ್ಚಿಮವಾಗಿ 20 ಅಡಿ ಚದರ ಸುತ್ತಳತೆಯನ್ನು ಹೊಂದಿರುವುದನ್ನು ಕ್ಷೇತ್ರಾಧ್ಯಯನದ ಮೂಲಕ ಗುರುತಿಸಿ ದಾಖಲೀಕರಿಸಲಾಗಿದೆ. ಇದರ ನವರಂಗದಲ್ಲಿ 16 ಚೌಕಾಕಾರದ ಕಂಬಗಳಿದ್ದು, ಸರಿಸುಮಾರು 6 ಅಡಿ ಎತ್ತರವಾಗಿವೆ. ನವರಂಗದ ದಕ್ಷಿಣಾಭಿಮುಖವಾಗಿ ಒಂದು ಗರ್ಭಗೃಹವಿದ್ದು ಯಾವುದೇ ವಿಗ್ರಹವಿರುವುದಿಲ್ಲ. ಮುಖಮಂಟಪದಲ್ಲಿ ವಿಜಯನಗರ ಮತ್ತು ಗಂಗರ ಕಾಲದ ವಾಸ್ತುಶೈಲಿಯನ್ನು ಹೊಂದಿರುವ ಚೌಕಾಕಾರದ ನಾಲ್ಕು ಕಂಬಗಳಿದ್ದು ಯಾವುದೇ ಉಬ್ಬುಶಿಲ್ಪ ಕೆತ್ತನೆಗಳಿಲ್ಲ.

ಜೈನ ಬಸದಿಯ ಮುಂಭಾಗದಲ್ಲಿ ಬಲಿ ಪೀಠವಿದೆ. ಈ ಬಸದಿಯ ಜಿನಬಿಂಬದ ಹಿಂಭಾಗದಲ್ಲಿ ಸರಿಸುಮಾರು 15ನೇ ಶತಮಾನಕ್ಕೆ ಸೇರಿದ ಶಾಸನವಿದೆ. ಈ ಶಾಸನವನ್ನು ಸಾಧಾರಣ ಸಂವತ್ಸರದ ಮಾರ್ಗಶಿರ ಶುದ್ಧ ಪಂಚಮಿ 5ನೇ ದಿನದಂದು ಬರೆಯಲಾಗಿದೆ. ಈ ಶಾಸನದ ಪ್ರಕಾರ; ಆನೆವಾಳಿನ ಚಿಕ್ಕಣಗೌಡರ ಮಗ ಹೊನ್ನಗೌಡರು ತಮ್ಮ ತಾಯಿಗೆ ಪುಣ್ಯಪ್ರಾಪ್ತವಾಗಲೆಂದು ಈ ಬಸದಿಯನ್ನು ಕಟ್ಟಿಸಲಾಗಿದೆ. ಹಾಗೆಯೇ ಈ ಶಾಸನವನ್ನು ಬರೆದ ಕರ್ತೃ ಚೆನ್ನಪ್ಪ ಎಂಬುದು ಶಾಸನದಿಂದ ದಾಖಲೀಕರಿಸಲಾಗಿದೆ ಎಂದು ಹೇಳಬಹುದು. ಹಾಗೆಯೇ ಸರಿಸುಮಾರು 10 ವರ್ಷಗಳ ಹಿಂದೆ ಅಂದರೆ; 13.5.2005ರಂದು ಅನೆವಾಳು ಗ್ರಾಮದಲ್ಲಿ ಬಸದಿಯೊಂದು ಇದು ಶಿಥಿಲವಾಗಿದೆ. ಕಲಾತ್ಮಕವಾದ ಬಸದಿಯನ್ನು ಸಂರಕ್ಷಿಸುವ ಉದ್ದೇಶದಿಂದ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ರಾಜಶ್ರೀ ಪದ್ಮಭೂಷಣ ಡಾ.ಡಿ.ವೀರೇಂದ್ರ ಹೆಗಡೆ ಅವರು ಶ್ರೀಧರ್ಮಸ್ಥಳದ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟಿನ ವತಿಯಿಂದ, ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಸಹಯೋಗ ಮತ್ತು ಗ್ರಾಮಸ್ಥರ ಸಹಕಾರದೊಂದಿಗೆ ಜೀರ್ಣೋದ್ಧಾರ ಕಾರ್ಯವನ್ನು ಮಾಡಲಾಗಿದೆ. ಈ ಬಸದಿಯು ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆಗೆ ಒಳಪಟ್ಟಿದೆ. ಈ ಬಸದಿಯಲ್ಲಿ ಪ್ರತಿದಿನವು ಪೂಜಾ ಕೈಂಕಾರ್ಯ ನಡೆಯುರುವುದು ಕ್ಷೇತ್ರಾಧ್ಯಯನದಲ್ಲಿ ಖುದ್ದು ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿ ದಾಖಲೀಕರಿಸಲಾಗಿರುತ್ತದೆ.

ಮುಂದುವರೆದಂತೆಯೆ ಇದೇ ಪಿರಿಯಾಪಟ್ಟಣ ತಾಲ್ಲೂಕು ಕೇಂದ್ರ ಪ್ರದೇಶದಿಂದ ಉತ್ತರಕ್ಕೆ ಸರಿಸುಮಾರು 30 ಕಿ. ಮೀ. ದೂರದಲ್ಲಿ ಕೊಣಸೂರು ಗ್ರಾಮವಿದೆ. ಇಲ್ಲಿಯ ಶಾಂತಿನಾಥ ಬಸದಿಯು ಪೂರ್ವಾಭಿಮುಖವಾಗಿರುವ ಏಕಕೂಟವಾಗಿದೆ. ಶಿಥಿಲಗೊಂಡಿದ್ದ ಈ ಶಾಂತಿನಾಥ ಬಸದಿಯನ್ನು ಧರ್ಮಸ್ಥಳದ ಧರ್ಮೋತ್ಥಾನ ಸಮಿತಿಯವರು ಜೀರ್ಣೋದ್ದಾರ ಮಾಡಿಸಿದ್ದಾರೆ. ಬಹುಶಃ ಈ ಬಸದಿಯು ಗಂಗರ ಕಾಲದ್ದಾಗಿದ್ದರೂ, ನವರಂಗದಲ್ಲಿರುವ ಕಂಬಗಳು ಅನಂತರದ ಶೈಲಿಯನ್ನು ಬಿಂಬಿಸುತ್ತವೆ. ಹಿಂದೆ ಜೈನ ಕೇಂದ್ರವಾಗಿದ್ದ, ಈ ಊರಿನಲ್ಲಿರುವ ಶಾಂತೇಶ್ವರ ಬಸದಿಯನ್ನು ಸರಿಸುಮಾರು 18ನೇ ಶತಮಾನದಲ್ಲಿ ಕಾಂತೂರ ವೀರಶೆಟ್ಟಿಯು ಜೀರ್ಣೋದ್ದಾರ ಮಾಡಿಸಿದ್ದಾನೆ ಎಂಬುದು ತಿಳಿದುಬರುತ್ತದೆ. ಹಾಗೆಯೇ ಇದೇ ಗ್ರಾಮದ ಬಸವನಗುಡಿಯ ಮುಂದೆ ನೆಟ್ಟಿರುವ ಕಲ್ಲಿನಲ್ಲಿ ಸರಿಸುಮಾರು ಕ್ರಿ.ಶ. 1591ನೇ ಅಕ್ಟೋಬರ್ 23ರ ಶಾಸನ ಸಂಖ್ಯೆ – 40ರ ಪ್ರಕಾರ; ಚಂಗಾಳ್ವ ಅರಸನಾಗಿದ್ದಂತಹ ಪಿರಿಯರಾಜದೇವರಸನು ಪಟ್ಟದರಾಣಿ ವಾಸಕ್ಕೆ ಕೈಲಾಸ ಲಭಿಸಲೆಂದು ವಿರೂಪಾಕ್ಷಪುರವನ್ನು ಅನ್ನದಾನಿ ಮಲ್ಲಿಕಾರ್ಜುನನಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಇದರಿಂದ ಈ ಗ್ರಾಮಕ್ಕೆ ಹಿಂದೆ ವಿರೂಪಾಕ್ಷಪುರ ಎಂಬ ಹೆಸರಿದ್ದ ಅಂಶವೂ ವೇದ್ಯವಾಗುತ್ತದೆ. ನೆರೆಯ ಬೂವನಹಳ್ಳಿಯಲ್ಲಿ ಚಂದ್ರನಾಥ ಬಸದಿಯಿದೆ. ಇದು ಸಂಪೂರ್ಣವಾಗಿ ಕಪ್ಪು ಗ್ರಾನೈಟ್ ಶಿಲೆಯಿಂದ ರಚಿತಗೊಂಡಿದೆ. ಈ ಬಸದಿಯು ವಿಜಯನಗರದ ಸಂಗಮ ವಂಶದ ದೊರೆ

ವಿರೂಪಾಕ್ಷನ ಆಳ್ವಿಕೆಯ ಕಾಲಮಾನದಲ್ಲಿ ಅಂದರೆ, ಸರಿಸುಮಾರು ಕ್ರಿ.ಶ. 1120ರಲ್ಲಿ ನಿರ್ಮಾಣಗೊಂಡಿದೆ. ಇದು ಜೈನ ಧರ್ಮದ 16ನೇ ತೀರ್ಥಂಕರನಾದ ಜಿನ ಶಾಂತಿನಾಥನ ಬಸದಿಯಾಗಿದೆ. ಈ ಬಸದಿಯಲ್ಲಿ ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪವನ್ನು ಕಾಣಬಹುದು. ಇದೇ ಗರ್ಭಗೃಹದಲ್ಲಿ ನಾಲ್ಕೂವರೆ ಅಡಿ ಎತ್ತರದ ನಿಂತಭಾವದ 16ನೇ ತೀರ್ಥಂಕರನಾದ ಶಾಂತಿನಾಥನ ವಿಗ್ರಹಮೂರ್ತಿಯನ್ನು ಇಡಲಾಗಿದೆ. ಎಡ ಮತ್ತು ಬಲ ಭಾಗದಲ್ಲಿ ಕ್ರಮವಾಗಿ ಯಕ್ಷ – ಯಕ್ಷಿಯರಾದ ಗರುಡ ಮತ್ತು ಮಹಾಮಾನಸೇರು ಎಂಬ ದೇವತೆಯ ವಿಗ್ರಹಗಳಿವೆ. ಗರ್ಭಗೃಹವು ಐದೂವರೆ x ಐದೂವರೆ ಚದರ ಸುತ್ತಳತೆಯನ್ನು ಹೊಂದಿದ್ದು, ಮೇಲ್ಭಗದಲ್ಲಿ ಭುವನೇಶ್ವರಿಯ ಚಿತ್ರವಿದೆ. ಸುಖನಾಸಿಯ ನಾಲ್ಕು ಮೂಲೆಯಲ್ಲಿಯೂ ಕಂಬಗಳಿದ್ದೂ ಮೇಲ್ಭಾಗದಲ್ಲಿ ಭುವನೇಶ್ವರಿಯ ಚಿತ್ರವನ್ನು ರಚಿಸಿರುವುದು ಕಂಡುಬರುತ್ತದೆ. ಇದರ ನವರಂಗವು ಪೂರ್ವ ಪಶ್ಚಿಮವಾಗಿ 35 ಅಡಿ ಉದ್ದ, ದಕ್ಷಿಣೋತ್ತರವಾಗಿ 30 ಅಡಿ ಅಗಲವಿರುತ್ತದೆ ಎಂಬುದನ್ನು ದಾಖಲಿಸಲಾಗಿದೆ. ನವರಂಗದಲ್ಲಿ ಸುಮಾರು 6 ಅಡಿ ಎತ್ತರ ಕಂಬಗಳಿದ್ದೂ ಇವುಗಳಲ್ಲಿ ಗಂಗರು, ವಿಜಯನಗರದ ಅರಸರು ಮತ್ತು ಚೋಳರ ಕಾಲಕ್ಕೆ ಸೇರಿದ ವಾಸ್ತುಶೈಲಿಯನ್ನು ಕಾಣಬಹುದು. ಇಲ್ಲಿನ ನವರಂಗದ ಮಧ್ಯ ಮೇಲ್ಭಾಗದಲ್ಲಿ ಭುವನೇಶ್ವರಿ ಚಿತ್ರವನ್ನು ನಕ್ಷತ್ರಾಕಾರವಾಗಿ ಮತ್ತು ಚೌಕಾಕಾರವಾಗಿ ಕಲ್ಲುಚಪ್ಪಡಿಯನ್ನು ಜೋಡಿಸಿರುವುದಲ್ಲದೇ ಮಧ್ಯದಲ್ಲಿ ಕಮಲದ ಚಿತ್ರವಿದೆವೊಂದನ್ನು ಕೆತ್ತಿಸಲಾಗಿರುವುದನ್ನು ಕ್ಷೇತ್ರಾಧ್ಯಯನದಲ್ಲಿ ಗುರುತಿಸಿ ದಾಖಲೀಕರಿಸಲಾಗಿದೆ.

ಇದೇ ಬಸದಿಯ ಮುಂಭಾಗದಲ್ಲಿ ಕ್ಷೇತ್ರಪಾಲ ಬಲಿಪೀಠವಿದೆ. ದೇವಾಲಯದ ಮೇಲಿನ ಮುಂಬಾಗದಲ್ಲಿ ಮೂರು ಕೋಷ್ಟಗಳಿದ್ದು, ಆದಿನಾಥ, ಶಾಂತಿನಾಥ ಮತ್ತು ಚಂದ್ರನಾಥ ವಿಗ್ರಹಗಳು ಕ್ರಮವಾಗಿವೆ. ಈ ಕೋಷ್ಟಕಗಳ ಮೇಲೆ ಗೋಪುರವಿದ್ದು, ಉತ್ತರ ಭಾರತದ ನಾಗರ ವಾಸ್ತುಶೈಲಿಯನ್ನು ಹೊಂದಿದೆ. ಇದೇ ಗರ್ಭಗೃಹದ ಮೇಲಿರುವ ಶಿಖರವು ಸಹ ನಾಗರ ವಾಸ್ತುಶೈಲಿಯಿಂದ ಕೂಡಿದೆ. ಇದು ಪೂರ್ವ ಪಶ್ಚಿಮವಾಗಿ 60 ಮೀಟರ್ ಉದ್ದ, ದಕ್ಷಿಣೋತ್ತರವಾಗಿ 12 ಮೀಟರ್ ಅಗಲವಿದೆ ಎಂಬುದನ್ನು ಗುರುತಿಸಲಾಗಿದೆ.

ಇದೇ ಗ್ರಾಮದಲ್ಲಿ ದೊರೆತಿರುವ ಸರಿಸುಮಾರು 18ನೇ ಶತಮಾನದ ಶಾಸನ ಸಂಖ್ಯೆ – 41ರ ಪ್ರಕಾರ: ಈ ಬಸದಿಯನ್ನು ಕೊಣಸೂರಿನ ವೀರಶೆಟ್ಟಿ ಎಂಬುವವರು ಜೀರ್ಣೋದ್ಧಾರ ಮಾಡಿಸಿರುವುದನ್ನು ರಿಂದ ತಿಳಿಯಬಹುದು. ಈ ಬಸದಿಯು ದುಃಸ್ಥಿತಿಯಲ್ಲಿದ್ದರಿಂದ 2000ದ ಇಸವಿಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಟ್ರಸ್ಟ್‌ನ ವತಿಯಿಂದ ಜೀರ್ಣೋದ್ಧಾರ ಮಾಡಲಾಯಿತು. ಪ್ರಸ್ತುತವಾಗಿ ಈ ಬಸದಿಯು ಮುಜರಾಯಿ ಇಲಾಖೆಗೆ ಒಳಪಟ್ಟಿದ್ದು, ಪ್ರತಿದಿನವೂ ಇಲ್ಲಿ ಪೂಜಾ ಕೈಂಕಾರ್ಯ ನಡೆಯುತ್ತಿರುವುದು ಕಂಡುಬಂದಿರುತ್ತದೆ. ಇದನ್ನು ಖುದ್ದು ಕ್ಷೇತ್ರಾಧ್ಯಯನದಲ್ಲಿ ಗುರುತಿಸಿ ದಾಖಲೀಕರಿಸಲಾಗಿದೆ.

ಪಿರಿಯಾಪಟ್ಟಣ ತಾಲೋಕು ಕೇಂದ್ರ ಪ್ರದೇಶದ ಉತ್ತರಕ್ಕೆ ಸರಿಸುಮಾರು 15 ಕಿ.ಮೀ. ದೂರದಲ್ಲಿ ಬೂವನಹಳ್ಳಿ ಗ್ರಾಮವಿದೆ. ಈ ಗ್ರಾಮದ ಮಧ್ಯೆದಲ್ಲಿ ಸರಿಸುಮಾರು 8 ಅಡಿ ಎತ್ತರದ ಗುಡ್ಡದ ಮೇಲೆ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿರುವ ಚಂದ್ರನಾಥ ಬಸದಿಯು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ರಚಿತವಾಗಿದೆ. ಇದು ಗಂಗರ ಕಾಲದ ವಾಸ್ತುಶೈಲಿಯನ್ನು ಹೊಂದಿದೆ. ಇದೇ ಗರ್ಭಗುಡಿಯಲ್ಲಿರುವ ಆದಿನಾಥ ವಿಗ್ರಹವು ಸೊಗಸಾದ ಕೆತ್ತನೆಯಿಂದ ಕೂಡಿದೆ. ಚಂದ್ರನಾಥ ಬಸದಿಯ ಜಿನಬಿಂಬ ಶಾಸನ, ಬಾಳಚಂದ್ರ ಸಿದ್ಧಾಂತ ಭಟರ ಶಿಷ್ಯರ ನಿಷಿದಿಗೆಯನ್ನು ಉಲ್ಲೇಖಿಸಿರುತ್ತದೆ ಎಂದು ಹೇಳಬಹುದು. ಇದನ್ನು ರಾಜ ಮಂಗರಸ ಎಂಬುವವನ ಆಳ್ವಿಕೆಯ ಕಾಲದಲ್ಲಿ ನಿರ್ಮಾಣಗೊಂಡಿತ್ತು ಎಂಬುದು ಅಲ್ಲಿನ ಸ್ಥಳೀಯರ ಅಭಿಪ್ರಾಯ. ಈ ಬಸದಿಯಲ್ಲಿ ಸರಿಸುಮಾರು ಕ್ರಿ.ಶ. 1947ರವರೆಗೆ ಪೂಜಾ ಕೈಂಕಾರ್ಯ ನಡೆಯುತ್ತಿದ್ದು, ಅನಂತರ 1947 ರಿಂದ ಈಚೆಗೆ ವಿನಾಕಾರಣದಿಂದ ಪೂಜೆ ತಪ್ಪಿ ಹೋಯಿತು. ಪುನಃ ಧರ್ಮಸ್ಥಳದ ಟ್ರಸ್ಟ್‌ನ ವತಿಯಿಂದ 2007ರಲ್ಲಿ ಪುನರ್ ನಿರ್ಮಾಣಗೊಂಡಿತು. ಈ ಬಸದಿಯು ಪ್ರಸ್ತುತವಾಗಿ ಸರ್ಕಾರದ ಮುಜರಾಯಿ ಇಲಾಖೆಗೆ ಒಳಪಟ್ಟಿಲ್ಲ. ಇಲ್ಲಿ ಪ್ರತಿದಿನವೂ ಸಹ ಪೂಜಾಭಿಷೇಕವನ್ನು ನೆರವೇರಿಸಲಾಗುತ್ತದೆ ಎಂಬುದನ್ನು ಗುರುತಿಸಲಾಗಿದೆ. ಇದೇ ಬಸದಿಯಲ್ಲಿನ ಗರ್ಭಗುಡಿ, ಸುಖನಾಸಿ, ನವರಂಗ, ಮುಖಮಂಟಪ ಹಾಗೂ ಚಂದ್ರಶಾಲೆಯನ್ನು ಕಾಣಬಹುದು. ಗರ್ಭಗುಡಿಯಲ್ಲಿ ಆದಿನಾಥ – ಚಂದ್ರನಾಥನ ವಿಗ್ರಹ ಉತ್ತಮ ಕಲಾಶೈಲಿಯಿಂದ ಕೂಡಿದೆ. ಸುಖನಾಸಿಯ ಹೊಸ್ತಿಲ ಮೇಲೆ ಜೈನ ತೀರ್ಥಂಕರನಾದ ಆದಿನಾಥನ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ನವರಂಗದಲ್ಲಿ 8 ಕಂಬಗಳಿದ್ದು ಚೌಕಾಕಾರವಾಗಿ ಸುಮಾರು 8 ಅಡಿ ಎತ್ತರವಾಗಿವೆ. ಕಂಬಗಳಲ್ಲಿ ಆನೆ, ಪದ್ಮ, ಕುದುರೆ ಮೇಲೆ ಕುಳಿತಿರುವ ಬ್ರಹ್ಮದೇವರು. ವೃಷಭ, ಕಳಸ, ಹಂಸ ಪಕ್ಷಿ, ಕೋತಿ, ಜೋಡಿ ಸರ್ಪ ಕಪಿಚ ಹೂಬಳ್ಳಿಗಳು ಹಾಗೂ ಮುಂತಾದ ಉಬ್ಬು ಶಿಲ್ಪಕೆತ್ತನೆಗಳನ್ನು ಕಾಣಬಹುದು. ಬಸದಿಯ ಮುಖ್ಯ ಪ್ರವೇಶದ್ವಾರದ ಮೇಲೆ ಮಧ್ಯದಲ್ಲಿ ಕುಳಿತಿರುವ ತೀರ್ಥಂಕರನ ಶಿಲ್ಪ ಎಡ ಮತ್ತು ಬಲ ಪಾರ್ಶ್ವದಲ್ಲಿ ಎರಡು ಆನೆಗಳು ಸೊಂಡಿಲನ್ನು ಮೇಲಕ್ಕೆ ಎತ್ತಿ ನಿಂತಿರುವ ಉಬ್ಬು ಶಿಲ್ಪವನ್ನು ಕಡೆಯಲಾಗಿದೆ. ಮುಖಮಂಟಪದಲ್ಲಿ ಸರಿಸುಮಾರು ಆರೂವರೆ ಅಡಿ ಎತ್ತರದ ಚೌಕಾಕಾರದ ಕಂಬಗಳಿದ್ದು, ವಿಜಯನಗರದ ವಾಸ್ತುಶೈಲಿಯನ್ನು ಹೋಲುತ್ತವೆ ಎಂಬುದನ್ನು ಕ್ಷೇತ್ರಾಧ್ಯಯನದಲ್ಲಿ ಗುರುತಿಸಿ ದಾಖಲೀಕರಿಸಲಾಗಿದೆ.

ಇದೇ ಬಸದಿಯ ಮುಖಮಂಟಪದ ಮೇಲ್ಭಾಗದಲ್ಲಿ ಕಮಾನಿನಾಕಾರದ ಕೋಷ್ಟಕ ಗೂಡಿನಲ್ಲಿ ನೇರ ಭಂಗಿಯಲ್ಲಿ ನಿಂತು ಕೈಮುಗಿಯುತ್ತಿರುವ ಜಿನ ಭಕ್ತನ ವಿಗ್ರಹ ಮತ್ತು ಪಕ್ಕದಲ್ಲಿಯೇ ಆನೆಯು ನೇರಭಂಗಿಯಲ್ಲಿ ನಿಂತು ತನ್ನ ಸೊಂಡಿಲನ್ನು ಮೇಲಕ್ಕೆತ್ತಿರುವ ಶಿಲ್ಪವನ್ನು ಕಾಣಬಹುದು. ಬಸದಿಯ ಸುತ್ತಲು ಅಷ್ಟದಿಕ್ಪಾಲಕರುಗಳು ಬಲಿಪೀಠಗಳಿವೆ. ಈ ಬಸದಿಯ ದಕ್ಷಿಣ ದಿಕ್ಕಿಗೊಂದು ಚಿಕ್ಕದಾದ

ಪ್ರವೇಶದ್ವಾರವಿದ್ದು ಪಕ್ಕದಲ್ಲಿ ಬಸದಿಯ ಬಲಭಾಗದಲ್ಲಿ ಕ್ಷೇತ್ರಪಾಲ ಗುಡಿಯಿರುವುದನ್ನು ಕಾಣಬಹುದು. ಬಿಂಬದಲ್ಲಿ ಶಾಸನ ಬರೆದಿದ್ದು, ಈಗ ಅದು ನಶಿಸಿಹೋಗಿದೆ. ಈ ಶಾಸನವು ಸರಿಸುಮಾರು 12ನೇ ಶತಮಾನಕ್ಕೆ ಸೇರಿದುದಾಗಿದೆ ಎಂಬುದನ್ನು ಕ್ಷೇತ್ರಾಧ್ಯಯನದಲ್ಲಿ ಗುರುತಿಸಲಾಗಿರುತ್ತದೆ.

ಸುಮತಿ ತೀರ್ಥಂಕರ ಬಸದಿಯು ಪಿರಿಯಾಪಟ್ಟಣ ತಾಲ್ಲೂಕು ಕೇಂದ್ರ ಪ್ರದೇಶ ದಿಂದ ಉತ್ತರಕ್ಕೆ ಸರಿಸುಮಾರು 19 ಕಿ.ಮೀ. ದೂರದಲ್ಲಿ ರಾವಂದೂರು ಗ್ರಾಮದಲ್ಲಿದೆ. ಐದು ಪ್ರಾಚೀನ ದೇವಾಲಯಗಳನ್ನು ಹೊಂದಿದೆ. ಇದು ಹೋಬಳಿ ಕೇಂದ್ರವೂ ಹೌದು, ರಾವಂದೂರಿನಿಂದ ಮಾಕೋಡು ಮಾರ್ಗವಾಗಿ ಕೃಷ್ಣರಾಜನಗರಕ್ಕೆ ಕುಡುಕೂರು ಬೆಟ್ಟದತುಂಗ ಮಾರ್ಗವಾಗಿ ಬೆಟ್ಟದಪುರಕ್ಕೆ, ಕಿತ್ತೂರು ಕಡೆಯಿಂದ ಹನಸೋಗೆ ಕೆರಳಾಪುರಕ್ಕೆ ಹಾಗೂ ಚುಂಚನಕಟ್ಟೆ ಮಾರ್ಗವಾಗಿ ಕೃಷ್ಣರಾಜನಗರಕ್ಕೆ ಸಾರಿಗೆ ಸಂಪರ್ಕವಿದೆ. ಇಲ್ಲಿರುವ ಸುಮತಿ ತೀರ್ಥಂಕರ ಬಸದಿಯ ಸರಿಸುಮಾರು ಕ್ರಿ.ಶ. 1383ನೇ ಸೆಪ್ಟೆಂಬರ್ 20ರಲ್ಲಿ ರಚಿಸಿರುವ ಶಾಸನ ಸಂಖ್ಯೆ – 125ರಲ್ಲಿ ಶ್ರುತಕೀರ್ತಿದೇವ ಎಂಬ ಜೈನ ಮುನಿಯು ಮುಕ್ತಿ ವಧೂವಲ್ಲಭನಾದುದರ ನೆನಪಿಗಾಗಿ ಸುಮತಿ ತೀರ್ಥಂಕರನ ಚೈತ್ಯಾಲಯದ ಜೀರ್ಣೋದ್ಧಾರವನ್ನು ಆದಿದೇವ ಮುನಿಗಳೂ ಅವರ ಶಿಷ್ಯರೂ ಹಾಗೂ ಸಮಸ್ತ ಭವ್ಯಜನಗಳು ಮಾಡಿಸಿದ ವಿಷಯವು ಉಲ್ಲೇಖಿತಗೊಂಡಿದೆ. ಈ ಶಾಸನದಿಂದ ರಾವಂದೂರು ಸರಿಸುಮಾರು 700 ವರ್ಷಗಳಿಗಿಂತಲೂ ಪ್ರಾಚೀನವಾದುದೆಂದು ವಿದಿತವಾಗುತ್ತದೆ. ಈ ಊರಿನಲ್ಲಿ ಒಟ್ಟು ಆರು ಶಾಸನಗಳು ಲಭಿಸಿದ್ದು, ಶ್ರುತಕೀರ್ತಿದೇವರ ಮರಣವನ್ನು ತಿಳಿಸುವ ಶಾಸನವೇ ಅತ್ಯಂತ ಪ್ರಾಚೀನದ್ದಾಗಿದೆ. ದ್ರಾವಿಡ ಶೈಲಿಯ ಅರ್ಜುನೇಶ್ವರ ದೇವಾಲಯವು ಗ್ರಾಮದ ಉತ್ತರ ದಿಕ್ಕಿನಲ್ಲಿ ದಕ್ಷಿಣಾಭಿಮುಖವಾಗಿದೆ. ಇದು ಚೋಳರ ಕಾಲದ ಏಕಕೂಟ ದೇವಾಲಯವಾಗಿದೆ. ರಾವಂದೂರಿನ ಉತ್ತರದಿಕ್ಕಿನಲ್ಲಿರುವ ಬಸದಿಯೂ ಗಂಗರ ಕಾಲದ ಕೊಡುಗೆ, ಈ ಬಸದಿಯು ಪೂರ್ವಾಭಿಮುಖನಾಗಿದ್ದು, ದ್ರಾವಿಡ ಶೈಲಿಯಲ್ಲಿರುವ ಏಕಕೂಟವಾಗಿದೆ. ಗರ್ಭಗೃಹದ ಹೊರಭಾಗದಲ್ಲಿ ಚೋಳ ವಾಸ್ತುಶೈಲಿಯನ್ನು ಹೋಲುವಂತಹ ಅರೆಕಂಬ ಮತ್ತು ಮಂಟಪ ಮಾದರಿಯ ಕೋಷ್ಟಗಳಿವೆ. ಈ ದೇವಾಲಯದ ಮೇಲುಭಾಗ ಮುಳ್ಳಿನ ಗಿಡಗಳಿಂದ ಮುಚ್ಚಿಹೋಗಿದೆ.

ಇದೇ ರಾವಂದೂರು ಗ್ರಾಮದ ಉತ್ತರ ದಿಕ್ಕಿನಲ್ಲಿರುವ ಶಿವ ದೇವಾಲಯವೊಂದು ಪೂರ್ವಾಭಿಮುಖವಾಗಿದ್ದು, ದ್ರಾವಿಡ ಶೈಲಿಯನ್ನು ಹೊಂದಿದೆ. ದೇವಾಲಯದ ಮೇಲ್ಭಾಗದಲ್ಲಿರುವ ಮೂರು ಕೋಷ್ಟಗಳಲ್ಲಿ ಶಿವನ ವಿಗ್ರಹಗಳಿವೆ. ದೇವಾಲಯದ ನಾಲ್ಕು ಮೂಲೆಯಲ್ಲೂ ಬಸವನ ವಿಗ್ರಹವಿದ್ದು, ಇದೇ ಗರ್ಭಗೃಹದ ಅಂಕಣದ ಮೇಲ್ಭಾಗದಲ್ಲಿ ಉಪಾನದಿಂದ ವಿಮಾನದವರೆಗೆ ದ್ರಾವಿಡ ಶೈಲಿಯ ಗೋಪುರವನ್ನು ಕಾಣುತ್ತೇವೆ. ಇದು ಸರಿಸುಮಾರು 15 ಅಡಿ ಎತ್ತರವಿದ್ದು ಚಂಗಾಳ್ವ ಅರಸರ ಕಾಲಮಾನದ ವಾಸ್ತುಶೈಲಿಯನ್ನು ಹೊಂದಿದೆ.

## ಗ್ರಂಥಸೂಚಿ


1. ***ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್,*** 2010
2. ***ಎಪಿಗ್ರಾಫಿಯಾ ಕರ್ನಾಟಿಕ,*** ಸಂಪುಟ–4, ಪಿರಿಯಾಪಟ್ಟಣ ತಾಲ್ಲೂಕು
3. ಡಾ.ಪಿ.ಕೆ.ರಾಜಶೇಖರ್ ಮತ್ತು ಎಸ್.ಟಿ.ದಕ್ಷಿಣಮೂರ್ತಿ, ***ಅಮೃತಕಾವಲ್, ಪಿರಿಯಾಪಟ್ಟಣ ತಾಲ್ಲೂಕು ಮಾಹಿತಿ ಕೋಶ***
4. ಬಿ.ಬಸವರಾಜು ತಗರಪುರ, ***ಐತಿಹ್ಯ ದರ್ಶನ, ಪಿರಿಯಾಪಟ್ಟಣ ತಾಲ್ಲೂಕು ಮಾಹಿತಿ ಕೋಶ***
5. ಬಿ.ಬಸವರಾಜು ತಗರಪುರ, ***ಶಿವಸಂಪದ, ಕಲೆ ಮತ್ತು ವಾಸ್ತುಶಿಲ್ಪ ಒಂದು ಅಧ್ಯಯನ***